ಎಂ.ವಿ.ಸಿ. ನಂ.234/2022 ರಲ್ಲಿ
ಪಿ.ಡಬ್ಲ್ಯೂ-1(ಪಾರ್ಥಸಾರಥಿ)

ದಿನಾಂಕ 19.01.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಕೆ.ಎನ್.ಎಸ್., ವಕೀಲರಿಂದಃ-

ನನಗೆ ಇಬ್ಬರು ಮಕ್ಕಳಿದ್ದು ಅವರ ಹೆಸರುಗಳು ಹರೀಶ ಮತ್ತು ಜಗದೀಶ. ಹೀರೋ ಹೋಂಡಾ ಸ್ಪ್ಲೆಂಡರ್ ನೋಂದಣಿ ಸಂಖ್ಯೆ ಕೆಎ-42-ಡಬ್ಲ್ಯೂ-0792 ನನ್ನ ಮಗ ಹರೀಶನ ಹೆಸರಿನಲ್ಲಿರುವ ವಾಹನ. ನನ್ನ ಮಗ ಹರೀಶ ಚಾಲನಾ ಪರವಾನಗಿಯನ್ನು ಹೊಂದಿದ್ದು ಅದರ ಪ್ರತಿಯನ್ನು ನಾನು ಹಾಜರುಪಡಿಸಬಹುದು. ಅಪಘಾತದ ದಿನ ನಾನು ಹಬ್ಬಕ್ಕೆಂದು ಲಕ್ಕೋಜನಹಳ್ಳಿಯಲ್ಲಿರುವ ನನ್ನ ಅಣ್ಣನ ಮನೆಗೆ ಹೋಗುತ್ತಿದ್ದೆನು. ಅವಿನಾಶ್‌ರವರು ಕುಣಿಗಲ್ ತಾಲ್ಲೂಕಿನ ಕುಳುಮೆಪಾಳ್ಯಕ್ಕೆ ಸೇರಿದವರು. ಸದರಿ ಅವಿನಾಶ್ ವ್ಯವಸಾಯ ಮಾಡಿಕೊಂಡಿದ್ದಾರೆ. ಅಪಘಾತದ ಸಮಯದಲ್ಲಿ ನಾನು ಹಾಗೂ ಅವಿನಾಶ್ ಇಬ್ಬರೂ ಗಾಡಿಯಿಂದ ಕೆಳಗೆ ಬಿದ್ದೆವು. ನನ್ನನ್ನು ಹಾಗೂ ಅವಿನಾಶ್‌ರವರನ್ನು ನನ್ನ ಮಗ ಹರೀಶ ಆಸ್ಪತ್ರೆಗೆ ಕರೆದುಕೊಂಡು ಹೋದನು. ಅಪಘಾತದ ಸಮಯದಲ್ಲಿ ಅವಿನಾಶ್ ಗಾಡಿ ಚಾಲನೆ ಮಾಡುತ್ತಿರಲಿಲ್ಲ ಎನ್ನುವುದು ಹಾಗೂ ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಪಘಾತದ ಸಮಯದಲ್ಲಿ 1ನೇ ಎದುರುದಾರರಿಗಾಗಲೀ ಅಥವಾ ನನಗಾಗಲೀ ವಾಹನ ಚಾಲನಾ ಪರವಾನಗಿ ಇರಲಿಲ್ಲ ಎನ್ನುವುದು ಹಾಗೂ ಅವಿನಾಶ್‌ರವರು ಸದರಿ ಬೈಕನ್ನು ಚಾಲನೆ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಪೊಲೀಸರೊಂದಿಗೆ ಶಾಮೀಲಾಗಿ ನಾನು ಸುಳ್ಳು ದೂರನ್ನು ಕೊಡಿಸಿದ್ದೇನೆ ಎನ್ನುವುದು ಸರಿಯಲ್ಲ.

2. ಅಪಘಾತಕ್ಕೆ ಸಂಬಂಧಿಸಿದಂತೆ ನಾನು ದೂರನ್ನು ಕೊಟ್ಟಿಲ್ಲ ಎನ್ನುವುದು ನಿಜ. ಈ ಅಪಘಾತಕ್ಕೆ ಸಂಬಂಧಿಸಿದಂತೆ ನಿಮ್ಮ ಮಗನಾಗಲೀ ಅಥವಾ ನೀವಾಗಲೀ ದೂರನ್ನು ಕೊಟ್ಟಿಲ್ಲ? ಎಂದರೆ ಸಾಕ್ಷಿಯು ನಾನು ಆಸ್ಪತ್ರೆಯಲ್ಲಿದ್ದು ನನ್ನ ಅಣ್ಣನ ಮಗ ರವಿ ದೂರನ್ನು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಯಲ್ಲಿ ನನಗೆ ಹೇಗೆ ಅಪಘಾತ ಸಂಭವಿಸಿತು ಎನ್ನುವ ಕುರಿತು ಹೇಳಿದ್ದೇನೆ. ಆಸ್ಪತ್ರೆಯಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ನಾನು ಸದರಿ ಹೇಳಿಕೆಯ ಪ್ರತಿಯನ್ನು ಹಾಜರುಪಡಿಸಿಲ್ಲ ಎನ್ನುವುದು ಸರಿಯಲ್ಲ.

3. ನನ್ನ ಚಿಕಿತ್ಸೆಯ ವೆಚ್ಚ, ಊಟೋಪಚಾರ ಹಾಗೂ ಪ್ರಯಾಣದ ವೆಚ್ಚಕ್ಕೆಂದು 3 ಲಕ್ಷ ರೂಗಳಷ್ಟು ಖರ್ಚು ಮಾಡಿರುವುದಾಗಿ ಬರೆಸಿರುವುದು ಸುಳ್ಳು ಎನ್ನುವುದು ಸರಿಯಲ್ಲ. ನನಗೆ ಪ್ರತಿ ದಿನಕ್ಕೆ 1,000/- ರೂಗಳ ವರಮಾನವಿತ್ತು ಎಂದು ಬರೆಸಿರುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ. ನಾನು ಆಸ್ಪತ್ರೆಯಿಂದ ಬಿಡುಗಡೆಗೊಂಡ ನಂತರದಲ್ಲಿ 15 ದಿನಗಳಿಗೊಮ್ಮೆ ಹಾಗೂ ತಿಂಗಳಿಗೊಮ್ಮೆ ಆಸ್ಪತ್ರೆಯಲ್ಲಿ ಹೊರರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ಬರೆಸಿರುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ. ನಿಮಗೆ ಸುಮಾರು 55 ರಿಂದ 60 ವರ್ಷ ವಯಸ್ಸಾಗಿದೆ? ಎಂದರೆ ಸಾಕ್ಷಿಯು 55 ವರ್ಷ ವಯಸ್ಸಾಗಿದೆ ಎಂದು ನುಡಿಯುತ್ತಾರೆ. ಅವಿನಾಶ್‌ರವರಿಗೆ ಅಪಘಾತದಲ್ಲಿ ಏನು ಗಾಯಗಳಾಗಿತ್ತು ಎನ್ನುವುದನ್ನು ಸಾಬೀತುಪಡಿಸಲು ನಾನು ಆತನ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಬಹುದು. ಅವಿನಾಶ್, 1 ನೇ ಎದುರುದಾರರು ಹಾಗೂ ನಾನು ಒಂದೇಕುಟುಂಬದವರಾಗಿದ್ದು ನಾನು ಎಲ್ಲಿಯೋ ಬಿದ್ದು ಗಾಯಪಡಿಸಿಕೊಂಡಿದ್ದು ಪರಿಹಾರ ಪಡೆಯುವ

ಉದ್ದೇಶಕ್ಕಾಗಿ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎನ್ನುವುದನ್ನು ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.